KASM630004762025

Presented on : 18-03-2025
Registered on : 18-03-2025
Decided on : 12-08-2026
Duration : 1 years, 4 months, 25 days

# ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: ಉಪಸ್ಥಿತರು :

**ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.**

C/C. ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 12 ನೇ ಆಗಸ್ಟ್ 2026

**ಸಿ.ಸಿ.ಸಂಖ್ಯೆ 401/2025**

| | |
|---|---|
| ಫಿರ್ಯಾದುದಾರರು | ಸರ್ಕಾರದ ಪರವಾಗಿ ಸಾಗರ ಗ್ರಾಮಾಂತರ ಪೊಲೀಸ್ ಠಾಣೆ. |
| | **(ಪ್ರತಿನಿಧಿಸಿದವರು ಸಹಾಯಕ ಸರ್ಕಾರಿ ಅಭಿಯೋಜಕರು)** |

*** ವಿರುದ್ಧ ***

| | |
|---|---|
| ಆರೋಪಿತ | ಯಲ್ಲಪ್ಪ ಕೆ.ಎಲ್.<br>ಬಿನ್ ಲೋಕಪ್ಪ, |

| | |
|---|---|
| | ವಯಸ್ಸುಃ 37 ವರ್ಷ,<br>ವಾಸಃ ಕಣಸೋಗಿ ಗ್ರಾಮ,<br>ಕೋಳಗಿ ಅಂಚೆ, ಶಿಕಾರಿಪುರ<br>ತಾಲ್ಲೂಕು, ಶಿವಮೊಗ್ಗ. |
| | **(ಪ್ರತಿನಿಧಿಸಿದವರು ಶ್ರೀ ಕೆ.ಎಂ.,ವಕೀಲರು)** |

| | |
|---|---|
| ಅಪರಾಧ ನಡೆದ ದಿನಾಂಕ | 12-11-2024 |
| ಅಪರಾಧ ವರದಿಯಾದ ದಿನಾಂಕ | 12-11-2024 |
| ಪಿರ್ಯಾದುದಾರರ ಹೆಸರು | ಅವಿನಾಶ್ ಎನ್. |
| ಸಾಕ್ಷಿ ವಿಚಾರಣೆ ಪ್ರಾರಂಭ ದಿನಾಂಕ | 06-07-2026 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 20-07-2026 |
| ಆರೋಪಿತರ ಮೇಲೆ ಹೊರಿಸಿದ ಆರೋಪಗಳು | ಭಾರತೀಯ ನ್ಯಾಯ ಸಂಹಿತೆಯ ಕಲಂ 281, 106 ಮತ್ತು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ 187. |
| ನ್ಯಾಯಾಲಯದ ಆದೇಶ | ಆರೋಪಿತನನ್ನು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ. |

# ತೀರ್ಪು

ಸರ್ಕಾರದ ಪರವಾಗಿ ಪೊಲೀಸ್ ನಿರೀಕ್ಷಕರು, ಸಾಗರ ಗ್ರಾಮಾಂತರ ಪೋಲೀಸ್ ಠಾಣೆ, ಸಾಗರ ತಾಲ್ಲೂಕು ಇವರು, ತಮ್ಮ ಠಾಣಾ ಗುನ್ನಾ ಸಂಖ್ಯೆಃ 165/2024 ರಂತೆ ಪ್ರಕರಣವನ್ನು ನೊಂದಾಯಿಸಿಕೊಂಡು, ತನಿಖೆ ಮಾಡಿ,

ಆರೋಪಿತನು ಭಾರತೀಯ ನ್ಯಾಯ ಸಂಹಿತೆಯ ಕಲಂ 281, 106 ಮತ್ತು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ 187 ರ ಅಡಿಯಲ್ಲಿನ ಆರೋಪಗಳಿಗಾಗಿ ದಂಡಿಸಬಹುದಾದ ಅಪರಾಧವನ್ನು ಎಸಗಿದ್ದಾನೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ,** ದಿನಾಂಕಃ 12.11.2024 ರಂದು ಸಂಜೆ 05.40 ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು, ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೌತಿ ಗ್ರಾಮದ ಬಸ್ ನಿಲ್ದಾಣದ ಮುಂದಿನ ಸಾಗರ–ಸೊರಬ ಎಸ್.ಹೆಚ್. 62 ರ ರಸ್ತೆಯಲ್ಲಿ ಚಾ.ಸಾ.9 ರವರ ತಂದೆ ರಾಮಚಂದ್ರಪ್ಪ ರವರು ಸಾಗರದ ಕಡೆಯಿಂದ ಕೌತಿ ಗ್ರಾಮದ ಕಡೆಗೆ ಹೋಗಲು ತಮ್ಮ ಕೆಎ–15/ಜೆ–1951 ರ ಬಜಾಜ್ ಕವಾಸಕಿ ಬಾಕ್ಸರ್ ಬೈಕ್ ನ್ನು ಚಾಲನೆ ಮಾಡಿಕೊಂಡು ರಸ್ತೆಯ ಪಕ್ಕದಲ್ಲಿ ಬೈಕ್ ನಿಲ್ಲಿಸಿ, ಎರಡು ಕಡೆ ನೋಡಿ ಬೈಕ್ ಇಂಡೀಕೇಟರ್ ಹಾಕಿ ಕೌತಿ ಕಡೆಗೆ ತಿರುಗಿಸುತ್ತಿದ್ದರು. ಆಗ ಆರೋಪಿತನು ಚಾ.ಸಾ.12 ರವರಿಗೆ ಸೇರಿದ ಕೆಎ–18/ಬಿ–7176 ನೇ ಇಕೋ ಕಾರನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ರಾಮಚಂದ್ರಪ್ಪರವರ ಬೈಕಿಗೆ ಡಿಕ್ಕಿ ಹೊಡೆಸಿ, ಅಪಘಾತಪಡಿಸಿದನು. ನಂತರ, ಆರೋಪಿತನ್ನು ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದನು. ಸದರಿ

ರಾಮಚಂದ್ರಪ್ಪ ರವರು ರಸ್ತೆಯ ಮೇಲೆ ಬಿದ್ದ ಪರಿಣಾಮ ತಲೆಯ ಹಿಂಭಾಗಕ್ಕೆ ಬಲವಾದ ಪೆಟ್ಟು ಬಿದ್ದು, ಮೂಗು, ಬಾಯಿ, ಕಿವಿಯಲ್ಲಿ ರಕ್ತ ಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುವುದು ತನಿಖೆಯಿಂದ ಕಂಡು ಬಂದಿರುತ್ತದೆ. ಆದಕಾರಣ, ಆರೋಪಿತನು ಭಾರತೀಯ ನ್ಯಾಯ ಸಂಹಿತೆಯ ಕಲಂ. 281, 106 ಮತ್ತು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ 187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾನೆ ಎಂದು ಆಪಾದಿಸಿ, ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ, ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

3. ಆರೋಪಿತನಿಗೆ ಸಮನ್ಸ್ ಜಾರಿ ಮಾಡಲಾಗಿ, ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿದ್ದು, ತಮ್ಮ ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯಕ್ಕೆ ಅಗತ್ಯವಾದ ಜಾಮೀನು ನೀಡಿದ್ದರಿಂದ, ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

4. ಆರೋಪಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ.230 ರ ರೀತಿ ಅಗತ್ಯಪಡಿಸಿರುವಂತೆ, ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ನಂತರ, ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಈ ಹಂತದಲ್ಲಿ ಆರೋಪಿತನ ವಿರುದ್ಧ ಆಪಾದನೆ/ದೋಷಾರೋಪಣೆಯನ್ನು ರಚಿಸಲು

ಸಾಕಷ್ಟು ಸಾಧನಗಳು ಲಭ್ಯವಿದ್ದ ಕಾರಣ, ಭಾರತೀಯ ನ್ಯಾಯ ಸಂಹಿತೆಯ ಕಲಂ. 281, 106 ಮತ್ತು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ 187 ರ ಅಡಿಯಲ್ಲಿ ಆರೋಪಗಳಿಗೆ ಅವನ ವಿರುದ್ದದ ಆಪಾದನೆ/ದೋಷಾರೋಪಣೆಯನ್ನು ತಯಾರಿಸಿ, ಓದಿ ವಿವರಿಸಲಾಗಿ, ಆರೋಪಿತನು ತಮ್ಮ ವಿರುದ್ದದ ಆರೋಪಗಳನ್ನು ಅಲ್ಲಗಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

5. ಅಭಿಯೋಜನೆಯವರು ಆರೋಪಿತನ ವಿರುದ್ದ ಇರುವ ಆರೋಪಗಳನ್ನು ರುಜುವಾತು ಪಡಿಸಲು, ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿದ 17 ಜನ ಸಾಕ್ಷಿದಾರರ ಪೈಕಿ 7 ಸಾಕ್ಷಿದಾರರನ್ನು ಪ್ರಾ.ಸಾ−1 ರಿಂದ 7 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ನಿ.ಪಿ.1 ರಿಂದ 25 ರವರೆಗಿನ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತದೆ. ಆರೋಪಿತನು ತನ್ನ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ.

6. ಅಭಿಯೋಜನೆಯ ಸಾಕ್ಷಿ ಮುಗಿದ ನಂತರ, ಆರೋಪಿತನ ವಿರುದ್ಧ ಅಪರಾಧ ಸೂಚಿಸುವ ಹೇಳಿಕೆಗಳನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಕಲಂ.351 ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಆರೋಪಿತನು ತನ್ನ ವಿರುದ್ದ ಸೂಚಿಸಿದ ಎಲ್ಲಾ ಹೇಳಿಕೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

7. ಉಭಯ ಪಕ್ಷಗಾರರ ವಾದ-ವಿವಾದಗಳನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು.

8. **ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.**

**ಅಂಶಗಳು**

1. ದಿನಾಂಕಃ 12.11.2024 ರಂದು ಸಂಜೆ 05.40 ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು, ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೌತಿ ಗ್ರಾಮದ ಬಸ್ ನಿಲ್ದಾಣದ ಮುಂದಿನ ಸಾಗರ-ಸೊರಬ ಎಸ್.ಹೆಚ್. 62 ರ ರಸ್ತೆಯಲ್ಲಿ ಚಾ.ಸಾ.9 ರವರ ತಂದೆ ರಾಮಚಂದ್ರಪ್ಪ ರವರು ಸಾಗರದ ಕಡೆಯಿಂದ ಕೌತಿ ಗ್ರಾಮದ ಕಡೆಗೆ ಹೋಗಲು ತಮ್ಮ ಕೆಎ-15/ಜೆ-1951 ರ ಬಜಾಜ್ ಕವಾಸಕಿ ಬಾಕ್ಸರ್ ಬೈಕ್ ನ್ನು ಚಾಲನೆ ಮಾಡಿಕೊಂಡು ರಸ್ತೆಯ ಪಕ್ಕದಲ್ಲಿ ಬೈಕ್ ನಿಲ್ಲಿಸಿ, ಎರಡು ಕಡೆ ನೋಡಿ ಬೈಕ್ ಇಂಡೀಕೇಟರ್ ಹಾಕಿ ಕೌತಿ ಕಡೆಗೆ ತಿರುಗಿಸುತ್ತಿದ್ದಾಗ, ಆರೋಪಿತನು ಚಾ.ಸಾ.12 ರವರಿಗೆ ಸೇರಿದ ಕೆಎ-18/ಬಿ-7176 ನೇ ಇಕೋ ಕಾರನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ರಾಮಚಂದ್ರಪ್ಪರವರ ಬೈಕಿಗೆ ಡಿಕ್ಕಿ ಹೊಡೆಸಿ, ಅಪಘಾತಪಡಿಸಿ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 281 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಮೇಲೆ ತಿಳಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಮೇಲ್ಕಂಡಂತೆ ಅಪಘಾತಪಡಿಸಿದ ಪರಿಣಾಮ ರಾಮಚಂದ್ರಪ್ಪ ರವರು ರಸ್ತೆಯ ಮೇಲೆ ಬಿದ್ದು, ತಲೆಯ ಹಿಂಭಾಗಕ್ಕೆ ಬಲವಾದ ಪೆಟ್ಟು ಬಿದ್ದು, ಮೂಗು, ಬಾಯಿ, ಕಿವಿಯಲ್ಲಿ ರಕ್ತ ಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆ ಮೂಲಕ ಆರೋಪಿತನು ಭಾರತೀಯ ನ್ಯಾಯ ಸಂಹಿತೆಯ ಕಲಂ.106 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಮೇಲೆ ತಿಳಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಮೇಲ್ಕಂಡ ರೀತಿ ಅಪಘಾತಪಡಿಸಿದ ನಂತರ, ಗಾಯಾಳುವನ್ನು ಉಪಚರಿಸದೇ, ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡದೇ, ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಆ ಮೂಲಕ ಆರೋಪಿತನು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ.187 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4. ಹಾಗಿದ್ದರೆ ಯಾವ ಆದೇಶ?

9. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆ.

**ಅಂಶ. 1 ರಿಂದ 3 : ನಕಾರಾತ್ಮಕವಾಗಿ,**

**ಅಂಶ. 4** : ಈ ಕೆಳಕಂಡ ಕಾರಣಗಳಿಂದಾಗಿ
ಅಂತಿಮ ಆದೇಶದಂತೆ,

## ಕಾರಣಗಳು

10. **ಅಂಶ 1 ರಿಂದ 3** :- ಈ ಎಲ್ಲಾ ಅಂಶಗಳ ಮೇಲಿನ ಚರ್ಚೆಯು, ಒಂದರ ಮೇಲೆ ಇನ್ನೊಂದು ಅವಲಂಭಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎರಡೂ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದಿನಾಂಕಃ 12.11.2024 ರಂದು ಸಂಜೆ 05.40 ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು, ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೌತಿ ಗ್ರಾಮದ ಬಸ್ ನಿಲ್ದಾಣದ ಮುಂದಿನ ಸಾಗರ-ಸೊರಬ ಎಸ್.ಹೆಚ್. 62 ರ ರಸ್ತೆಯಲ್ಲಿ ಚಾ.ಸಾ.9 ರವರ ತಂದೆ ರಾಮಚಂದ್ರಪ್ಪ ರವರು ಸಾಗರದ ಕಡೆಯಿಂದ ಕೌತಿ ಗ್ರಾಮದ ಕಡೆಗೆ ಹೋಗಲು ತಮ್ಮ ಕೆಎ-15/ಜೆ-1951 ರ ಬಜಾಜ್ ಕವಾಸಕಿ ಬಾಕ್ಸರ್ ಬೈಕ್ ನ್ನು ಚಾಲನೆ ಮಾಡಿಕೊಂಡು ರಸ್ತೆಯ ಪಕ್ಕದಲ್ಲಿ ಬೈಕ್ ನಿಲ್ಲಿಸಿ, ಎರಡು ಕಡೆ ನೋಡಿ ಬೈಕ್ ಇಂಡೀಕೇಟರ್ ಹಾಕಿ ಕೌತಿ ಕಡೆಗೆ ತಿರುಗಿಸುತ್ತಿದ್ದಾಗ, ಆರೋಪಿತನು ಚಾ.ಸಾ.12 ರವರಿಗೆ ಸೇರಿದ ಕೆಎ-18/ಬಿ-7176 ನೇ ಇಕೋ ಕಾರನ್ನು ಅತೀವೇಗ ಹಾಗೂ

ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ರಾಮಚಂದ್ರಪ್ಪರವರ ಬೈಕಿಗೆ ಡಿಕ್ಕಿ ಹೊಡೆಸಿ, ಅಪಘಾತಪಡಿಸಿ, ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ರಾಮಚಂದ್ರಪ್ಪ ರವರು ರಸ್ತೆಯ ಮೇಲೆ ಬಿದ್ದ ಪರಿಣಾಮ ತಲೆಯ ಹಿಂಭಾಗಕ್ಕೆ ಬಲವಾದ ಪೆಟ್ಟು ಬಿದ್ದು, ಮೂಗು, ಬಾಯಿ, ಕಿವಿಯಲ್ಲಿ ರಕ್ತ ಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುವುದರಿಂದ, ಆರೋಪಿತನು ಭಾರತೀಯ ನ್ಯಾಯ ಸಂಹಿತೆಯ ಕಲಂ. 281, 106 ಮತ್ತು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ 187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದಾರೆಂಬುದು ಅಭಿಯೋಜನೆಯ ನಿಲುವಾಗಿದೆ.

11. ಫ್ರಾ.ಸಾ–1 ರವರು ದೂರುದಾರರಾಗಿರುತ್ತಾರೆ. ಫ್ರಾ.ಸಾ.2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಫ್ರಾ.ಸಾ.4 ಮತ್ತು 5 ರವರು ಸ್ಥಳ ಪಂಚನಾಮೆ ಮತ್ತು ವಾಹನ ತಡೆ ಪಂಚನಾಮೆಯ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರರಾಗಿರುತ್ತಾರೆ. ಫ್ರಾ.ಸಾ.5 ರವರು ದೂರನ್ನು ಸ್ವೀಕರಿಸಿ, ಪ್ರಕರಣದ ಸಂಪೂರ್ಣ ತನಿಖೆಯನ್ನು ಕೈಗೊಂಡು ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ತನಿಖಾಧಿಕಾರಿಗಳು. ಫ್ರಾ.ಸಾ.7 ರವರು ಅಪಘಾತಪಡಿಸಿದ ಕಾರಿನ ಮಾಲೀಕರಾಗಿರುತ್ತಾರೆ.

12. ಅಭಿಯೋಜನೆಯ ಪರವಾಗಿ ಗುರುತಿಸಲಾದ ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ನಿ.ಪಿ.1 ದೂರು, ನಿ.ಪಿ. 2 ಸ್ಥಳ ಪಂಚನಾಮೆಯಾಗಿರುತ್ತದೆ. ನಿ.ಪಿ.3 ರಿಂದ 6 ಫೋಟೋಗಳಾಗಿರುತ್ತವೆ. ನಿ.ಪಿ.7 ಅಮಾನತ್ತು ಪಂಚನಾಮೆ. ನಿ.ಪಿ.8 ಮತ್ತು 9 ಸಾಕ್ಷಿದಾರರ ಹೇಳಿಕೆಗಳಾಗಿರುತ್ತವೆ. ನಿ.ಪಿ.10 ಪ್ರಥಮ ವರ್ತಮಾನ ವರದಿಯಾಗಿರುತ್ತದೆ. ನಿ.ಪಿ.11 ಶವ ತನಿಖಾ ವರದಿಯಾಗಿರುತ್ತದೆ. ನಿ.ಪಿ.12 ರಿಂದ 15 ಫೋಟೋಗಳಾಗಿರುತ್ತವೆ. ನಿ.ಪಿ.16 ಶವ ಪರೀಕ್ಷಾ ವರದಿ. ನಿ.ಪಿ.17 ನೋಟೀಸ್ ಆಗಿರುತ್ತದೆ. ನಿ.ಪಿ.18 ಪಿ.ಎಫ್ ಆಗಿರುತ್ತದೆ. ನಿ.ಪಿ.19 ವಾಹನದ ಮಾಲೀಕರಿಗೆ ನೀಡುವ ನೋಟೀಸ್ ಆಗಿರುತ್ತದೆ. ನಿ.ಪಿ.20 ಕಲಂ 133 ಐಎಂವಿ ಆಕ್ಟ್ ಅಡಿಯಲ್ಲಿ ನೀಡಿದ ನೋಟೀಸಿಗೆ ಸಮಾಜಾಯಿಸಿ ನೀಡುತ್ತಿರುವ ಕುರಿತು ಪತ್ರ. ನಿ.ಪಿ.21 ಮೋಟಾರ್ ವಾಹನಗಳ ಅಪಘಾತದ ವರದಿ. ನಿ.ಪಿ.22 ಇಂಡಿಮಿನಿಟಿ ಬಾಂಡ್. ನಿ.ಪಿ.23 ಸಿ.ಡಿ. ಆಗಿರುತ್ತದೆ. ನಿ.ಪಿ.24 ಕಲಂ 63(4) ರ ಅಡಿಯಲ್ಲಿ ಧೃಡೀಕರಣ ಪತ್ರ ಮತ್ತು ನಿ.ಪಿ.25 ಸಾಕ್ಷಿದಾರರ ಹೇಳಿಕೆಯಾಗಿರುತ್ತದೆ.

13. ಪ್ರಾ.ಸಾ.1 ರವರು ಈ ಪ್ರಕರಣದ ದೂರುದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12.11.2025 ರಂದು ತಾನು ಮನೆ ಒಳಗೆ ಇದ್ದೆ. ಆಗ ಏನೋ ಶಬ್ದ ಬಂತು. ತಾನು ಹೋಗಿ ನೋಡಿದಾಗ, ತನ್ನ

ಚಿಕ್ಕಪ್ಪ ಓಡಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೂ ಕಾರಿಗೂ ಅಪಘಾತವಾಗಿತ್ತು ಎಂದು ಹೇಳಿಕೆ ನೀಡಿದ್ದಾರೆ. ತನ್ನ ಚಿಕ್ಕಪ್ಪನನ್ನು ಅಲ್ಲಿಂದ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ತನ್ನ ಚಿಕ್ಕಪ್ಪನ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿದಾಗ, ವೈದ್ಯರು ತನ್ನ ಚಿಕ್ಕಪ್ಪ ಸ್ಥಳದಲ್ಲಿಯೇ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ, ತಾನು ದೂರನನ್ನು ದಾಖಲಿಸಿರುವುದಾಗಿ ಹೇಳಿಕೆ ನೀಡಿದ್ದಾರೆ. **ಅಪಘಾತ ಯಾರ ತಪ್ಪಿನಿಂದ ಆಯಿತು, ಮತ್ತು ಹೇಗಾಯಿತು ಎಂದು ತನಗೆ ಗೊತ್ತಿಲ್ಲ** ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ನಿ.ಪಿ.1 ರಿಂದ 7 ದಾಖಲೆಗಳನ್ನು ಗುರುತಿಸಿರುತ್ತಾರೆ. ಆದರೆ, ಸದರಿ ಪ್ರಾ.ಸಾ.2 ರವರು ಈ ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿರುವುದಿಲ್ಲ.

14. ಇವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿನಲ್ಲಿ ಪ್ರಶ್ನಿಸಿದಾಗ ತಾವು ಹೋಗುವಾಗ ತನ್ನ ಚಿಕ್ಕಪ್ಪ ರಾಮಚಂದ್ರಪ್ಪ ರವರು ಸಾಗರದ ಕಡೆಯಿಂದ ಕೌತಿ ಗ್ರಾಮದ ಕಡೆಗೆ ಹೋಗಲು ತಮ್ಮ ಕೆಎ-15/ಜೆ-1951 ನೇ ಬಜಾಜ್ ಕವಾಸಕಿ ಬಾಕ್ಸರ್ ಬೈಕನ್ನು ಚಾಲನೆ ಮಾಡಿಕೊಂಡು ರಸ್ತೆಯ ಪಕ್ಕದಲ್ಲಿ ಬೈಕ್ ನಿಲ್ಲಿಸಿ, ಎರಡೂ ಕಡೆ ನೋಡಿ, ಬೈಕ್ ಇಂಡಿಕೇಟರ್ ಹಾಕಿ ಕೌತಿ ಕಡೆಗೆ ತಿರುಗಿಸುತ್ತಿದ್ದಾಗ, ಆರೋಪಿತನು ಕೆಎ-18/ಬಿ-7176 ನೇ ಇಕೋ ಕಾರನ್ನು ಅತೀ ವೇಗ ಹಾಗೂ

ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ತನ್ನ ಚಿಕ್ಕಪ್ಪ ರವರ ಬೈಕ್ ಗೆ ಡಿಕ್ಕಿ ಹೊಡೆಸಿ, ಅಪಘಾತಪಡಿಸಿ ಕಾರನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುವುದನ್ನು ಅಲ್ಲಗಳೆದು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷ್ಯನುಡಿದಿರುತ್ತಾರೆ.

15. ಫ್ರಾ.ಸಾ.2 ಮತ್ತು 3 ರವರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, **ಅಪಘಾತವನ್ನು ಯಾರು ಮಾಡಿದರು ಏನು ಎಂದು ತಮಗೆ ಗೊತ್ತಿಲ್ಲ. ತಾವು ಅಪಘಾತವನ್ನು ನೋಡಿರುವುದಿಲ್ಲ** ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿರವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ, ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗುವ ಯಾವುದೇ ಸಾಕ್ಷ್ಯವನ್ನು ಫ್ರಾ.ಸಾ.2 ಮತ್ತು 3 ರವರು ನೀಡಿರುವುದಿಲ್ಲ.

16. ಫ್ರಾ.ಸಾ. 4 ಮತ್ತು 5 ರವರು ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಯ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರು ತಮ್ಮ ಪಾಟೀ ಸವಾಲಿನಲ್ಲಿ ನಿ.ಪಿ.2 ಮತ್ತು 7 ರಂತೆ ಪೊಲೀಸರು ತಮ್ಮ ಸಮಕ್ಷಮ ಸ್ಥಳ ಪಂಚನಾಮೆ ಹಾಗೂ ವಾಹನಗಳ ಅಮಾನತ್ತು ಪಂಚನಾಮೆ ಕ್ರಮವನ್ನು ಜರುಗಿಸಿರುವುದನ್ನು ಒಪ್ಪಿಕೊಂಡಿರುವುದಿಲ್ಲ.

17. ಪ್ರಾ.ಸಾ.6 ರವರು ಅನುಕ್ರಮವಾಗಿ ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರು ಚಾ.ಸಾ.1 ರವರು ನೀಡಿದ ನಿ.ಪಿ.1 ರ ದೂರನ್ನು ಸ್ವೀಕರಿಸಿ, ಪ್ರಕರಣವನ್ನು ದಾಖಲಿಸಿಕೊಂಡು, ಪ್ರಕರಣದ ಸಂಪೂರ್ಣ ತನಿಖೆಯನ್ನು ನಡೆಸಿ, ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಕುರಿತು ಸಾಕ್ಷಿ ನುಡಿದಿರುತ್ತಾರೆ.

18. ಮತ್ತೊಬ್ಬ ಸಾಕ್ಷಿದಾರರಾದ ಪ್ರಾ.ಸಾ.7 ರವರು ಅಪಘಾತಪಡಿಸಿದ ವಾಹನದ ಮಾಲೀಕರಾಗಿದ್ದು, ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನೀಡಿರುತ್ತಾರೆ. ಸದರಿರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗಲೂ ಸಹ, ಅಭಿಯೋಜನೆಯ ಪೂರಕವಾಗುವ ಯಾವುದೇ ಸಾಕ್ಷ್ಯವನ್ನು ಪ್ರಾ.ಸಾ.7 ರವರು ನೀಡಿರುವುದಿಲ್ಲ.

19. ಅಭಿಯೋಜನೆಯ ಪರವಾಗಿ ವಿಚಾರಣೆಗೆ ಒಳಪಟ್ಟ ಒಟ್ಟು ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ, ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ.2 ಮತ್ತು 3 ರವರು ಅಭಿಯೋಜನೆಗೆ ಸಂಪುರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪ್ರಾ.ಸಾ.1 ರವರು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಪ್ರಾ.ಸಾ.4 ಮತ್ತು 7 ರವರು ಸಹ ಅಭಿಯೋಜನೆಯನ್ನು ಬೆಂಬಲಿಸಿರುವುದಿಲ್ಲ.

20. ಅದೇರೀತಿಯಾಗಿ, ವಾಹನವನ್ನು ಯಾಂತ್ರಿಕ ತಪಾಸಣೆಯನ್ನು ಮಾಡಿದ ಅಧಿಕಾರಿಗಳು ಯಾವುದೇ ಯಾಂತ್ರಿಕ ದೋಷದಿಂದ ಅಪಘಾತವಾಗಿಲ್ಲ ಎಂಬುದಾಗಿ ವರದಿ ನೀಡಿರುತ್ತಾರೆ. ಅಭಿಯೋಜನೆಯ ಪರವಾಗಿ ವಿಚಾರಣೆಗೆ ಒಳಪಟ್ಟ ಯಾವುದೇ ಸಾಕ್ಷಿದಾರರು ಆರೋಪಿತನು ನಿರ್ಲಕ್ಷತನದಿಂದ ತನ್ನ ವಾಹನವನ್ನು ಚಾಲನೆ ಮಾಡಿದ ಪರಿಣಾಮವಾಗಿ ಅಪಘಾತವಾಯಿತು ಎಂಬ ಹೇಳಿಕೆಗಳನ್ನು ನೀಡಿರುವುದಿಲ್ಲ. ಪ್ರಾ.ಸಾ. 2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಂತೆ ತಮ್ಮ ಸಾಕ್ಷಿಯನ್ನು ನುಡಿದಿದ್ದರು ಸಹ, ತಾನು ಪ್ರತ್ಯಕ್ಷವಾಗಿ ಅಪಘಾತವನ್ನು ನೋಡಿಲ್ಲ ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ.ಸಾ.1 ರಿಂದ 3 ರವರು ತಮಗೆ ಗೊತ್ತಿಲ್ಲವೆಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಎಲ್ಲಾ ಹೇಳಿಕೆಗಳನ್ನು ಪರಿಶೀಲನೆ ಮಾಡಿದಾಗ, ಯಾವುದೇ ಸಾಕ್ಷಿದಾರರು ಆರೋಪಿತನು ತನ್ನ ಕಾರನ್ನು ನಿಷ್ಕಾಳಜಿತನದಿಂದ ಚಾಲನೆ ಮಾಡಿದ ಪರಿಣಾಮವಾಗಿ ಅಪಘಾತವಾಯಿತು ಎಂಬ ಹೇಳಿಕೆಗಳನ್ನು ನೀಡಿರುವುದಿಲ್ಲ.

21. ಪ್ರತ್ಯಕ್ಷ ಸಾಕ್ಷಿದಾರರು ಮತ್ತು ದೂರುದಾರರು ಆರೋಪಿತನು ನಿಷ್ಕಾಳಜಿತನದಿಂದ ಕಾರನ್ನು ಓಡಿಸಿದ ಪರಿಣಾಮ ಅಪಘಾತವಾಯಿತು ಎಂಬ ಹೇಳಿಕೆಯನ್ನು ನೀಡದೇ ಇರುವುದು ಅಭಿಯೋಜನೆಯ ಒಟ್ಟು ಪ್ರಕರಣದ

ಕುರಿತು ಬಲವಾದ ಸಂಶಯವನ್ನುಂಟು ಮಾಡುತ್ತದೆ. ಆದಕಾರಣ, ಅಭಿಯೋಜನೆಯು ಆರೋಪಿತನ ವಿರುದ್ಧ ಮಾಡಿರುವ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಸೂಕ್ತ ಹಾಗೂ ನಂಬಲರ್ಹವಾದ ಸಾಕ್ಷ್ಯಧಾರಗಳಿಂದ ಸಾಬೀತುಪಡಿಸಲು ವಿಫಲವಾಗಿರುತ್ತದೆ. ಆದಕಾರಣ, ಸಂಶಯದ ಲಾಭವನ್ನು ಆರೋಪಿತನಿಗೆ ನೀಡುವುದು ಸೂಕ್ತ ಎಂಬುದಾಗಿ ತೀರ್ಮಾನಿಸಿ, ಮೇಲಿನ ಅಂಶ 1 ರಿಂದ 3 ನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತೇನೆ.

22. **ಅಂಶ 4**: ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ರಿಂದ 3 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುವುದರಿಂದ ಆರೋಪಿತನು ಬಿಡುಗಡೆಗೆ ಅರ್ಹನಾಗಿದ್ದು, ಈ ಕೆಳಕಂಡ ಆದೇಶ ಹೊರಡಿಸಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ.**255(1)** ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನ ವಿರುದ್ಧ ಹೊರಿಸಲಾದ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ. 281, 106 ಮತ್ತು ಭಾರತೀಯ ಮೋಟಾರ್ ವಾಹನಗಳ ಕಾಯಿದೆಯ ಕಲಂ 187 ರ ಅಡಿಯಲ್ಲಿನ ಆರೋಪಗಳಿಂದ ಆರೋಪಿತನನ್ನು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಿದೆ.

ಆರೋಪಿತನು ಮತ್ತು ಅವನ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.483 ರಡಿಯಲ್ಲಿ ಮುಂದಿನ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ ನಂತರ ತಪ್ಪುಗಳನ್ನು ಅದನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 12 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

**(ಮಾದೇಶ ಎಂ.ವಿ.,)**
**C/C. ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**

## ಅನುಬಂಧ

1. **ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ**

ಪ್ರಾ.ಸಾ.1 ಅವಿನಾಶ್.

ಪ್ರಾ.ಸಾ.2 ಮಧು.

ಪ್ರಾ.ಸಾ.3 ಸುಭಾಷ್.

ಪ್ರಾ.ಸಾ.4 ರಾಮಪ್ಪ.

ಪ್ರಾ.ಸಾ.5 ಅಭಿಷೇಕ್.

ಪ್ರಾ.ಸಾ.6 ಮಹಾಬಲೇಶ್ವರ ಎಸ್.ಎನ್.

ಪ್ರಾ.ಸಾ.7 ಸಚಿನ್.

2. <u>ಅಭಿಯೋಜನೆಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ</u>

| | |
|---|---|
| ನಿ.ಪಿ.1 | ದೂರು. |
| ನಿ.ಪಿ.2 | ಸ್ಥಳ ಪಂಚನಾಮೆ. |
| ನಿ.ಪಿ.3 ರಿಂದ 6 | ಫೋಟೋಗಳು. |
| ನಿ.ಪಿ.7 | ವಾಹನ ಅಮಾನತ್ತು ಪಂಚನಾಮೆ. |
| ನಿ.ಪಿ.8 ಮತ್ತು 9 | ಸಾಕ್ಷಿದಾರರ ಹೇಳಿಕೆಗಳು. |
| ನಿ.ಪಿ.10 | ಪ್ರಥಮ ವರ್ತಮಾನ ವರದಿ. |
| ನಿ.ಪಿ.11 | ಶವ ತನಿಖಾ ವರದಿ. |
| ನಿ.ಪಿ.12 ರಿಂದ 15 | ಫೋಟೋಗಳು |
| ನಿ.ಪಿ.16 | ಶವ ಪರೀಕ್ಷಾ ವರದಿ. |
| ನಿ.ಪಿ.17 | ಪಂಚರಿಗೆ ನೀಡಲಾದ ನೋಟೀಸ್. |
| ನಿ.ಪಿ.18 | ಸ್ವತ್ತಿನ ಪಟ್ಟಿ |
| ನಿ.ಪಿ.19 | ನೋಟೀಸ್. |
| ನಿ.ಪಿ. 20 | ನೋಟೀಸ್ ಉತ್ತರ. |
| ನಿ.ಪಿ.21 | ಮೋಟಾರ್ ವಾಹನಗಳ ಅಪಘಾತದ ವರದಿ. |
| ನಿ.ಪಿ.22 | ಇಂಡಿಮಿನಿಟಿ ಬಾಂಡ್. |
| ನಿ.ಪಿ.23 | ಸಿ.ಡಿ. |
| ನಿ.ಪಿ.24 | ಕಲಂ 63(4) ರ ಧೃಡೀಕರಣ ಪ್ರಮಾಣ ಪತ್ರ. |
| ನಿ.ಪಿ.25 | ಸಾಕ್ಷಿದಾರರ ಹೇಳಿಕೆ. |

3. ಅಭಿಯೋಜನೆಯ ಪರ ಗುರ್ತಿಸಲಾದ ಮುದ್ದೆ ಮಾಲುಗಳ ಪಟ್ಟಿಃ

– ಏನೂ ಇಲ್ಲ –

**4. ಆರೋಪಿತರ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ**

– ಏನೂ ಇಲ್ಲ –

**5. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ**

– ಏನೂ ಇಲ್ಲ –

**C/C. ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**